ವಿಷಯ :– ರಾಮದುರ್ಗ ಒಳಚರಂಡಿ ಯೋಜನೆಯು ಕಾರ್ಯಗತ ನಿಧಾನವಾಗಿದ್ದಕ್ಕೆ.

ಪ್ರ. 178 (139) ಶ್ರೀ ಎಫ್. ಎ. ಕೊಪ್ಪದ್ (ರಾಮದುರ್ಗ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ರಾಮದುರ್ಗ ನಗರ ಸಭೆಯ ಕ್ಷೇತ್ರದಲ್ಲಿ ಒಳಚರಂಡಿ ಯೋಜನೆಯ ಕುಂಟಿತ ಪ್ರಗತಿಯು ಸರಕಾರದವರ ಗಮನಕ್ಕೆ ಬಂದಿದೆಯೇ ;

ಆ. ಸದರಿ ಯೋಜನೆಯ ಅಂದಾಜು ವೆಚ್ಚವೆಷ್ಟು ? ಕಾರ್ಯವನ್ನು ಎಂದು ಪ್ರಾರಂಭಿಸ ಲಾಗುವುದು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು :—

ಅ. ಇಲ್ಲ–ಯಾವ ಒಳಚರಂಡಿ ಯೋಜನೆಯೂ, ರಾಮದುರ್ಗ ಪಟ್ಟಣಕ್ಕೆ ಪ್ರಸ್ತಾವನೆ ಯಲ್ಲಿಲ್ಲ.

ಆ. ಉದ್ಭವಿಸುವುದಿಲ್ಲ.

ಶ್ರೀ ಎಫ್.ಎ. ಕೊಪ್ಪದ್.––ರಾಮದುರ್ಗದ ಜನತೆ ಒಳಚರಂಡಿ ವ್ಯವಸ್ಥೆ ಇಲ್ಲದೆ, ರೋಗಕ್ಕೆ ತುತ್ತಾಗುತ್ತಿದ್ದಾರೆ ಒಳಚರಂಡಿ ವ್ಯವಸ್ಥೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಪ್ರತಿ ದಿನ ಇಷ್ಟು ಗ್ಯಾಲನ್ ನೀರು ಬಂದರೆ ಒಳಚರಂಡಿ ವ್ಯವಸ್ಥೆ ಮಾಡಬೇಕಾಗುತ್ತದೆ ಎಂದು ಒಂದು ನಿಯಮ ಇದೆ. ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಒಳ ಚರಂಡಿ ಯೋಜನೆಯನ್ನು ತೆಗೆದುಕೊಂಡಿಲ್ಲ.

ಅಧ್ಯಕ್ಷರು.––ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆ

ವಿಷಯ :– ಬೆಂಗಳೂರು ನಗರದಲ್ಲಿ ಸೊಳ್ಳೆಗಳ ಹಾಗೂ ಮಲೇರಿಯಾ ಹಾವಳಿ.

ಪ್ರ. 180(106) ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಬೆಂಗಳೂರು ನಗರದಲ್ಲಿ ಸೊಳ್ಳೆಗಳ ಕಾಟ ಮತ್ತು ಮಲೇರಿಯಾ ಹಾವಳಿ ಹೆಚ್ಚಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ. ನಗರದ ಯಾವ ಭಾಗಗಳಲ್ಲಿ ಸೊಳ್ಳೆಗಳ ಕಾಟ ಹೆಚ್ಚಾಗಿದೆ ;

ಇ. ಸೊಳ್ಳೆಗಳ ಕಾಟವನ್ನು ತಡೆಗಟ್ಟಲು ಸರಕಾರದವರು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ಮತ್ತು 1983–84ರ ಸಾಲಿನಲ್ಲಿ ಈಗಾಗಲೇ ಮಾಡಿರುವ ವೆಚ್ಚವೆಷ್ಟು :

ಈ. ಸೊಳ್ಳೆಗಳ ಕಾಟವನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರದವರು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು) :—

ಅ. ಬಂದಿದೆ.

ಆ. ನಗರ ಹೊರವಲಯ ಪ್ರದೇಶಗಳು ಮತ್ತು ಹುಲ್ಲು ಬೆಳೆದಿರುವ ತಗ್ಗು ಪ್ರದೇಶಗಳಲ್ಲಿ.

ಇ. ಸೊಳ್ಳೆಗಳ ಕಾಟವನ್ನು ತಡೆಗಟ್ಟಲು ಈ ಕೆಳಕಂಡ ಕಾರ್ಯಗಳನ್ನು ತೆಗೆದುಕೊಳ್ಳ ಲಾಗುತ್ತಿದೆ :—

1. ಸೊಳ್ಳೆ ಉತ್ಪತ್ತಿಯಾಗತಕ್ಕ ಸ್ಥಳಗಳಿಗೆ ಸೂಕ್ತ ರಾಸಾಯನಿಕ ವಸ್ತುಗಳನ್ನು ಸಿಂಪಡಿಸ ಲಾಗುತ್ತಿದೆ.

2. ಸೊಳ್ಳೆಮರಿಗಳನ್ನು ತಿನ್ನುವ ಮೀನುಗಳನ್ನು ನೀರನ್ನು ಉಪಯೋಗಿಸದಂಥ ಬಾವಿಗಳಲ್ಲಿ ಬಿಡಲಾಗಿದೆ.

3. ಸೊಳ್ಳೆಗಳ ಮೂಲ ಉತ್ಪತ್ತಿಯಾಗುವಂಥ ಸ್ಥಳಗಳಾದ ಕೆಟ್ಟನೀರು ಹಾಗೂನೀರಿನ ಗಿಡ ಗಳು ಬೆಳೆದಿರುವ ಕೆರೆಗಳಲ್ಲಿ ಗಿಡಗಳನ್ನು ತೆಗೆಸಿ ಆ ಕೆರೆಗಳ ಅಂಚಿನಲ್ಲಿ ರಾಸಾಯನಿಕ ವಸ್ತು ಗಳನ್ನು ಸಿಂಪಡಿಸಲಾಗುತ್ತಿದೆ.

4. ಹೊಗೆ ಉಗುಳುವ 3 ಯಂತ್ರಗಳಿಂದ ಗೊತ್ತುಪಡಿಸಿದ ಸ್ಥಳಗಳಿಗೆ ಸೊಳ್ಳೆಗಳನ್ನು ನಿರ್ಮೂಲ ಮಾಡುವ ಹೊಗೆಯನ್ನು ಬಿಡಲಾಗುತ್ತಿದೆ.

5. 12 ಕೈಯಿಂದ ಉಪಯೋಗಿಸಿ ಹೊಗೆ ಬಿಡುವ ಯಂತ್ರಗಳನ್ನು ಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಯಂತ್ರಗಳನ್ನು ಕೊಳಚೆ ಪ್ರದೇಶ ಹಾಗೂ ಸಣ್ಣ ಸಣ್ಣ ಗಲ್ಲಿಗಳಲ್ಲಿ ಉಪಯೋಗಿಸಲು ನಿಯೋಜಿಸಲಾಗಿದೆ.

6. ಮುಖ್ಯವಾಗಿ ಮೋರಿಗಳಲ್ಲಿ ಕಸ ತೆಗೆದು ನೀರು ಸರಾಗವಾಗಿ ಹೋಗಲು ಅನುಕೂಲ ಮಾಡಿ ಸೊಳ್ಳೆಗಳ ಉತ್ಪತ್ತಿಗೆ ತಡೆಹಾಕಲಾಗಿದೆ.
7. ಕೆರೆಗಳಲ್ಲಿದ್ದ ನೀರನ್ನು ಕೋಡಿ ಹೊಡೆದು ಹೊರಹಾಕಿ ಸೊಳ್ಳೆ ಉತ್ಪತ್ತಿಯನ್ನು ಆ ಜಾಗ ಗಳಲ್ಲಿ ಕಡಿಮೆ ಮಾಡಲಾಗಿದೆ.
ಸೊಳ್ಳೆ ನಿಯಂತ್ರಣಕ್ಕೆ 83-84 (ಎಪ್ರಿಲ್‌ನಿಂದ ಜೂನ್‌ರವರೆವಿಗೆ) 8 ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ.

ಈ. ಈ ವಿಷಯವನ್ನು ಪರಿಶೀಲಿಸಲಾಗುತ್ತಿದೆ.

Sri A. Lakshmisagar.—(Hon'ble Minister for Law, Parliamentary Affairs. & Public grievances): Sir, I beg to lay on the table of the House Questions for Written Answers- 11th list.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನಿಡಲಾದ ಲಿಖಿತ ಉತ್ತರಗಳು

ವಿಷಯ :—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಯ ಅಭಾವದಿಂದ ಆಹಾರ ಮತ್ತು ಇತರೆ ವಾಣಿಜ್ಯ ಬೆಳೆಗಳಿಗೆ ಹಾನಿಯುಂಟಾದ ಬಗ್ಗೆ.

ಪ್ರ. 78(41) ಶ್ರೀ ಕೆ ರಾಮಭಟ್ (ಪುತ್ತೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಯ ಅಭಾವದಿಂದಾಗಿ ಆಹಾರ ಮತ್ತು ಇತರ ವಾಣಿಜ್ಯ ಬೆಳೆಗಳಿಗೆ 1982-83, ಮತ್ತು 1983-84 ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹಾನಿ ವುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;
ಆ. ಹಾಗಿದ್ದಲ್ಲಿ ಅದರ ಪ್ರಮಾಣವೆಷ್ಟು ?
ಇ. ಈ ಹಿನ್ನೆಲೆಯಲ್ಲಿ ಸರ್ಕಾರದವರು ರೈತರಿಗೆ ಅನುಕೂಲತೆಗಳನ್ನು ಒದಗಿಸಿದ್ದಾರೆಯೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು) :—

ಅ. ದಕ್ಷಿಣ ಕನ್ನಡ ಜಿಲ್ಲೆಯನ್ನು 1982-83 ಮತ್ತು 1983-84ಯಲ್ಲಿ ಅಭಾವ ಪೀಡಿತ ಪ್ರದೇಶವೆಂದು ಘೋಷಿಸಲಾಗಿಲ್ಲಾ, ಕಾರಣಾ ಆಹಾರ ಮತ್ತು ವಾಣಿಜ್ಯ ಬೆಳೆಗಳಿಗೆ ಆಹಾರ ಹಾನಿವುಂಟಾಗಿದೆಯೆಂಬ ಪ್ರಶ್ನೆ ಬರುವುದಿಲ್ಲ.
ಆ. ಈ ಪ್ರಶ್ನೆ ಉದ್ಭವಿಸುವುದಿಲ್ಲಾ.
ಇ. ಈ ಪ್ರಶ್ನೆ ಉದ್ಭವಿಸುವುದಿಲ್ಲಾ.

ವಿಷಯ :—ಗ್ರಾಮ ಸಹಾಯಕರ ಬೇಡಿಕೆಗಳು.

ಪ್ರ. 79(140) ಶ್ರೀ ಕೆ. ರಾಮಭಟ್ (ಪುತ್ತೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಕರ್ನಾಟಕ ರಾಜ್ಯದಲ್ಲಿ ಈಗ ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರ ಸಂಖ್ಯೆ ಎಷ್ಟು ; ಇವರು ಸರಕಾರಿ ನೌಕರರ ಯಾವ ವರ್ಗಕ್ಕೆ ಸೇರುತ್ತಾರೆ ;
ಆ. ಗ್ರಾಮಸಹಾಯಕರಿಗೆ ಈಗ ಕೊಡುತ್ತಿರುವ ತಿಂಗಳ ವೇತನ ಎಷ್ಟು ;
ಇ. ತಮ್ಮ ವೇತನ ಹೆಚ್ಚಿಸಬೇಕೆಂದು ಮತ್ತು ಇತರ ಬೇಡಿಕೆಗಳನ್ನು ಮುಂದಿಟ್ಟು ಗ್ರಾಮ ಸಹಾಯಕರು ಸರಕಾರಕ್ಕೆ ಮನವಿ ಸಲ್ಲಿಸಿರುತ್ತಾರೆಯೆ ;
ಈ. ಈ ಬೇಡಿಕೆಗಳ ಕುರಿತು ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು) :—

ಅ. ಕರ್ನಾಟಕ ರಾಜ್ಯದಲ್ಲಿ ಈಗ ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರ ಸಂಖ್ಯೆ 9779. ಈ ಹುದ್ದೆಗಳು ಸ್ಟೆಪ್ಪೆಂಡರಿ ಹುದ್ದೆಗಳಾಗಿದ್ದು ಮತ್ತು ಐದು ವರ್ಷಗಳ ಅವಧಿಯ ತಾತ್ಕಾಲಿಕ ಹುದ್ದೆಗಳಾಗಿರುವುದರಿಂದ ಯಾವ ಸರ್ಕಾರಿ ನೌಕರರ ವರ್ಗಕ್ಕೂ ಸೇರುವುದಿಲ್ಲ.
ಆ. ತಿಂಗಳಿಗೆ 120 ರೂಪಾಯಿಗಳ ನಿಗದಿತ ಸಂಭಾವನೆಯನ್ನು ಕೊಡಲಾಗುತ್ತಿದೆ.
ಇ. ಸಲ್ಲಿಸಿರುತ್ತಾರೆ.
ಈ. ಈ ಹುದ್ದೆಗಳು ತಾತ್ಕಾಲಿಕ ಹುದ್ದೆಗಳಾಗಿರುವುದರಿಂದ ಮತ್ತು ಇವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿಲ್ಲವಾದ್ದರಿಂದ ಅವರ ಬೇಡಿಕೆಗಳ ಬಗ್ಗೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :—ಸರ್ಕಾರವು ಗ್ರಾಮ ಲೆಕ್ಕಿಗರ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸುವ ಬಗ್ಗೆ.

ಪ್ರ. 80(11) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಕಂದಾಯ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಸರ್ಕಾರವು ಗ್ರಾಮ ಲೆಕ್ಕಿಗರ ಮೇಲೆ ಈ ಕೆಳಕಂಡ ದಾಖಲೆಗಳನ್ನು ನಿರ್ವಹಿಸುವಾಗ ವಿಳಂಬವು ಕಂಡು ಬಂದಲ್ಲಿ ಜವಾಬ್ದಾರಿಯನ್ನು ನಿಗದಿ ಪಡಿಸುವ ವಿಚಾರವನ್ನು ಪರಿಗಣಿಸುವುದೆ ?